ದಿನಾಂಕಃ 28-06-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ.ಬಿ.ಪಿ.ಹೆಚ್ ವಕೀಲರಿಂದಃ</u>

ನಾನು ಹೊನಗೇರಾ ಗ್ರಾಮದಲ್ಲಿ ವಾಸವಾಗಿದ್ದೇನೆ. ಸರ್ವೆ ನಂ.37 ರಲ್ಲಿ ಒಟ್ಟು 11 ಎಕರೆ ಚಿಲ್ಲರೆ ಗುಂಟೆ ಜಮೀನು ಇದೆ. ಸದರಿ ಜಮೀನು ನಮ್ಮ ಹಿರಿಯರ ಆಸ್ತಿ ಆಗಿರುತ್ತದೆ ಎಂದರೆ ಸರಿ. ಸರ್ವೆ ನಂ.37 ರ ಒಟ್ಟು ಜಮೀನಿನ ಪೂರ್ವಕ್ಕೆ ಗುಂಡೆ ಮಲ್ಲಪ್ಪ ರವರ ಜಮೀನು, ಪಶ್ಚಿಮಕ್ಕೆ ಹತ್ತಿಕುಣಿ ಭೀಮಶಪ್ಪ ರವರ ಜಮೀನು, ಉತ್ತರಕ್ಕೆ ನಮ್ಮದೇ ಜಮೀನು ಹಾಗೂ ದಕ್ಷಿಣಕ್ಕೆ ಪ್ರತಿವಾದಿಯ ಜಮೀನು ಇದೆ. ನನ್ನ ದಾವಾ 01 ಎಕರೆ 10 ಗುಂಟೆ ಜಮೀನಿನ ಪೂರ್ವಕ್ಕೆ ಬಸಪ್ಪ ಕಾಕಲವಾರ ರವರ ಜಮೀನು, ಪಶ್ಚಿಮಕ್ಕೆ ಸಾಬಣ್ಣ ಕಾಕಲವಾರ ರವರ ಜಮೀನು, ಉತ್ತರಕ್ಕೆ ಮಲ್ಲಯ್ಯ ತಂದೆ ನಿಂಗಪ್ಪ ಕಾಕಲವಾರ ರವರ ಜಮೀನು ಹಾಗೂ ದಕ್ಷಿಣಕ್ಕೆ 1 ನೇ ಪ್ರತಿವಾದಿಯ ಜಮೀನು ಇದೆ. ನನ್ನ ದಾವಾ ಜಮೀನಿನ ಉತ್ತರಕ್ಕೆ 3 ನೇ ಪ್ರತಿವಾದಿಯ ಜಮೀನು ಇದೆ ಎಂದರೆ ಸರಿಯಲ್ಲ.

2. ಪ್ರತಿವಾದಿಯರು ನನ್ನ ಸ್ವಾ ದೀನಕ್ಕೆ ತೊಂದರೆ ನಿಖರ ದಿನಾಂಕ ನನಗೆ ನೆನಪಿಲ್ಲ. ಪ್ರತಿವಾದಿಯರಿಗೆ ಸರ್ವೆ ನಂ.36 ರಲ್ಲಿ ಅವರ ಮುತ್ತಾತ ನಿಂದ ಬಂದ ಜಮೀನು ಇರುತ್ತದೆ ಎಂದರೆ ಸರಿ. ಪ್ರತಿವಾದಿಯರ ತಂದೆಯ ಹೆಸರಿಗೆ ಹಿಂದೆ ಖಾತೆ ಆಗಿತ್ತು ಎಂದರೆ ಸರಿ. ನಂತರ ಪ್ರತಿವಾದಿಯರು ಸದರಿ ಜಮೀನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸರ್ವೆ ನಂ.36 ರಲ್ಲಿ ಪ್ರತಿವಾದಿಯರಿಗೆ ಅವರ ಹಿರಿಯರಿಂದ ಬಂದ 09 ಎಕರೆ 28 ಗುಂಟೆ ಜಮೀನು ಇದೆಎಂದರೆ ಸಾಕ್ಷಿಯು ನನಗೆ ಅವರ ಜಮೀನು ಕ್ಷೇತ್ರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂತರ ವಿಭಾಗದಲ್ಲಿ 1 ಮತ್ತು 2 ನೇ ಪ್ರತಿವಾದಿಯರಿಗೆ ತಲಾ 02 ಎಕರೆ 15 ಗುಂಟೆ ಹಾಗೂ 3 ಮತ್ತು 4 ನೇ ಪ್ರತಿವಾದಿಯರಿಗೆ ತಲಾ 02 ಎಕರೆ 19 ಗುಂಟೆ ಜಮೀನು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಿಭಾಗದ ಪ್ರಕಾರ ಪ್ರತಿವಾದಿಯರ ಹೆಸರಿಗೆ ಪ್ರತ್ಯೇಕ ಪಹಣಿ ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಅವರ ಜಮೀನುಗಳಿಗೆ ಸಂಬಂದಿಸಿದಂತೆ ಪ್ರತ್ಯೇಕ ನಮೂನೆ-10 ನಕಾಶೆ ಸಹ ತಯಾರಿಸಿದ್ದಾರೆ ಎಂದರೆ ನನಗೆ

ಗೊತ್ತಿಲ್ಲ. ದಿನಾಂಕ 03.09.2019 ರಂದು ನಮೂನೆ 10ರ ನಾಕಶೆ ತಯಾರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮೂನೆ 10ರ ನಕಾಶೆಯಂತೆ ಸರ್ವೆ ನಂ.36/1ರ ಜಮೀನು 1 ನೇ ಪ್ರತಿವಾದಿಗೆ, ಸರ್ವೆ ನಂ.36/2ರ ಜಮೀನು 2 ನೇ ಪ್ರತಿವಾದಿಗೆ, ಸರ್ವೆ ನಂ.36/3ರ ಜಮೀನು 3 ನೇ ಪ್ರತಿವಾದಿಗೆ ಹಾಗೂ ಸರ್ವೆ ನಂ.36/4ರ ಜಮೀನು 4 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಪ್ರತಿವಾದಿಯರು ತಮ್ಮ ತಮ್ಮ ಪಾಲಿನ ಜಮೀನುಗಳ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನಮ್ಮ ಸರ್ವೆ ನಂ.37ರ ಜಮೀನು ಹಾಗೂ ಪ್ರತಿವಾದಿಯರ ಸರ್ವೆ ನಂ.36ರ ಜಮೀನು ಒಂದಕ್ಕೊಂದು ಹೊಂದಿಕೊಂಡಿವೆ ಎಂದರೆ ಸರಿ. 2022ರ ಮೇ ತಿಂಗಳಿನಲ್ಲಿ ನಾನು ಮತ್ತು ಸರ್ವೆ ನಂ.37ರ ಇತರೆ ಹಿಸ್ಸಾದರರು ಸೇರಿ ನಮ್ಮ ಉತ್ತರಕ್ಕೆ 1 ನೇ ಪ್ರತಿವಾದಿ 03 ಗುಂಟೆ, 2 ನೇ ಪ್ರತಿವಾದಿಯ 08 ಗುಂಟೆ, 3 ನೇ ಪ್ರತಿವಾದಿಯ 07 ಗುಂಟೆ ಹಾಗೂ 4 ನೇ ಪ್ರತಿವಾದಿಯ 05 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದೇವು ಎಂದರೆ ಸರಿಯಲ್ಲ. ಆ ನಂತರ ದಿಃ 30.05.2022 ರಂದು ಪ್ರತಿವಾದಿಯರು ಸರ್ವೆ ನಂ.36ರ ಹದ್ದುಬಸ್ತ್ ಗುರುತಿಸಿ ಕೊಡುವಂತೆ ಭೂಮಾಪನ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಭೂಮಾಪಕರು ಸ್ಥಳಕ್ಕೆ ಬಂದು ಜಮೀನು ಅಳತೆ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಸರ್ವೆ ನಂ.37ರ ಹಿಸ್ಸಾದಾರರು ಸೇರಿಕೊಂಡು ಸರ್ವೆ ನಂ.36ರ ದಕ್ಷಿಣ ಭಾಗದ ಪ್ರತಿವಾದಿಯರಿಗೆ ಸೇರಿದ ಒಟ್ಟು 23 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದೇವೆ ಎಂದು ಭೂ ಮಾಪಕರು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಉಭಯ ಪಕ್ಷಗಾರರು ಹಿರಿಯರ ಸಮಕ್ಷಮ ಪಂಚಾಯಿತಿ ಮಾಡಿದಾಗ ನಾವು ಪ್ರತಿವಾದಿಯರಿಗೆ ದಿಃ 24.09.2022 ರಂದು ಒತ್ತುವರಿ ಜಮೀನು ಬಿಟ್ಟುಕೊಟ್ಟಿದ್ದೆವು ಎಂದರೆ ಸರಿಯಲ್ಲ. ನಾವು ಒತ್ತುವರಿ ಮಾಡಿರುವ ಹಾಗೂ ನಂತರ ಜಮೀನು ಬಿಟ್ಟುಕೊಟ್ಟಿರುವ ವಿಷಯ ಸತ್ಯವಾಗಿದ್ದರು ನಾನು ಈಗ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿಯರು ಯಾವುದೇ ತಂಟೆ-ತಕರಾರು ಮಾಡದಿದ್ದರೂ ನಾವು ಈ ಸುಳ್ಳು ದಾವೆ ದಾಖಲಿಸಿ ಏಕಪಕ್ಷಿಯ ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶ ಪಡೆದು ಅದನ್ನು ದುರುಪಯೋಗ ಪಡಿಸಿಕೊಂಡು ಮತ್ತೆ ಪ್ರತಿವಾದಿಯರಿಂದ ಒತ್ತುವರಿ ಮಾಡಿದ್ದ 23

ಗುಂಟೆ ಜಮೀನನ್ನು ದಿನಾಂಕ 20.06.2023 ರಂದು ಸ್ವಾಧೀನಮಾಡಿಕೊಡಿಂದ್ದೇವೇ ಎಂದರೆ ಸರಿಯಲ್ಲ. ಪ್ರತಿವಾದಿಯರು 23 ಗುಂಟೆ ಜಮೀನಿನ ಸ್ವಾಧೀನದಿಂದ ಹೊರ ಹಾಕಿದ್ದರೂ ಸಹ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಜಮೀನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ಸಾಕಷ್ಟು ಸಲ ವಿನಂತಿಸಿಕೊಂಡರೂ ಸಹ ನಾನು ಒತ್ತುವರಿ ಮಾಡಿದ ಜಮೀನು ಬಿಟ್ಟು ಕೊಡುತ್ತಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ರೂ.500/- ಖರ್ಚಿನ ಮೇರೆಗೆ ಸಮಯ ನೀಡಿ ಮುಂದೂಡಲಾಗಿದೆ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ